'ಸೋತ ಕಣ್ಣುಗಳನ್ನು ಮಿಟುಕಿಸುವ ಮಧ್ಯಾಹ್ನ' ಸಂಕಲನವು ಲಾಕ್‌ಡೌನ್ ಕಾಲದ ಪ್ರತಿಯೊಬ್ಬರ ಅನುಭವವೂ ಹೌದು. ಈ ಅನುಭವವು ತುರ್ತು ಪರಿಸ್ಥಿತಿಯೊಂದರ ತಾತ್ಕಾಲಿಕ ನೆಲೆಯದ್ದೇ ಎಂದು ಕೇಳಿಕೊಂಡರೆ, ಬಹುಶಃ ಅಲ್ಲವೇನೋ ಎನ್ನುವ ಸತ್ಯವೂ ಹೊಳೆಯುತ್ತದೆ. ಸೋತ ಕಣ್ಣುಗಳು ಲೋಕದ ಸುದೀರ್ಘ ಪ್ರಯಾಣದ ಆಯಾಸವೂ ಹೌದು, ನಡೆಯಬಾರದ ದಾರಿಯಲ್ಲಿ ನಡೆದ ಆಯಾಸದಿಂದ ಸೋತಿರುವ ಕಣ್ಣುಗಳದ್ದೂ ಹೌದು, ಅಪರಾಧ ಪ್ರಜ್ಞೆಯಲ್ಲಿ ಸೋತ ಕಣ್ಣುಗಳೂ ಹೌದು. ನಿಜ, ದಿವಾಕರರ ಕವನ ಸಂಕಲನದ ಶೀರ್ಷಿಕೆಗೆ ಇಷ್ಟೆಲ್ಲ ವ್ಯಾಪ್ತಿಯನ್ನು ನಾನು ಹೊರಿಸುತ್ತಿದ್ದೇನೆ. ಅವರು ಈ ಕವಿತೆಗಳನ್ನು ಬರೆದ ಕಾಲದಲ್ಲಿ ಈ ಸನ್ನಿವೇಶವೇನೂ ಉದ್ಭವವಾಗಿರಲಿಲ್ಲ. ಆದರೆ, ಹಿಂದಿನ ಮತ್ತು ಮುಂದಿನ ಭಾರಗಳನ್ನು ಹೊರುವ ಶಕ್ತಿಯಿಲ್ಲದಿದ್ದರೆ ಅದು ಕಾವ್ಯ ಯಾಕಾದೀತು?

ದಿವಾಕರರ ಕಾವ್ಯ ನಿಜಕ್ಕೂ ನನ್ನ ಮಟ್ಟಿಗಂತೂ ಒಂದು ವಿಶೇಷ ಅಚ್ಚರಿ, ಸಂತೋಷದಾಯಕ ಅಚ್ಚರಿ. ಅದು ನನ್ನದೇ ಮಿತಿ ಎನ್ನುವುದೂ ನಿಜವೇ. ನಾನು ಅವರ ಹಿಂದಿನ ಕಾವ್ಯವನ್ನು ಓದಿಲ್ಲ. ಅವರ ಕತೆ, ಪ್ರಬಂಧಗಳು, ವಿಮರ್ಶೆ ಎಲ್ಲವನ್ನೂ ಓದಿದ್ದೇನೆ. ಆದರೆ ಇವರ ಕಾವ್ಯ ಅದು ಯಾಕೆ ನನ್ನಿಂದ ತಪ್ಪಿಸಿಕೊಂಡಿತೋ (ವಿಮರ್ಶಕರಿಂದ ತಪ್ಪಿಸಿಕೊಳ್ಳುವ ಇರಾದೆ ಅದಕ್ಕಿದ್ದಿರಲಾರದು!) ಕಾಣೆ.

ಮೊದಲ ಓದಿಗೇ ಸ್ಪಷ್ಟವಾಗುವ ಅಂಶವೆಂದರೆ, ಇವು 'ಕಾವ್ಯ ಶಿಲ್ಪ'ದ ಮಹತ್ವಾಕಾಂಕ್ಷೆಯ ಕವಿತೆಗಳು ಎನ್ನುವುದು. ಕಾವ್ಯವು ಸೋದ್ದಿಶ್ಯವಾದುದು ಎನ್ನುವುದನ್ನು ನಂಬಿರುವ ಕಾವ್ಯ ದಿವಾಕರರದು. ಈ ದೃಷ್ಟಿಯಿಂದ ದಿವಾಕರರು ನವ್ಯ ಕಾವ್ಯದ ಹಾದಿಯ ಪಯಣಿಗರು. ಇದೇ ಈ ಸಂಕಲನದ ಹೆಚ್ಚುಗಾರಿಕೆ. ಸಮಕಾಲೀನ ಕನ್ನಡ ಕಾವ್ಯದ ಬಗೆಗೆ ನನಗಂತೂ ಸಕಾರಣವಾದ ಹೆಮ್ಮೆಯಿದೆ. ಕವಿಗಳ ಪ್ರಯೋಗಶೀಲತೆ, ಅವರ ಮುಕ್ತ ಧೋರಣೆಗಳು, ಅವರು ಪಡೆಯುತ್ತಿರುವ ಯಶಸ್ಸು ಎಲ್ಲವೂ ಕನ್ನಡ ಕಾವ್ಯವನ್ನು ಅಖಿಲ ಭಾರತದ ಮಟ್ಟದಲ್ಲೂ ಮುಂಚೂಣಿಯಲ್ಲಿ ನಿಲ್ಲಿಸಿವೆ. ಇತರ ಪ್ರಕಾರಗಳ ಮಟ್ಟಿಗೂ ಇದು ನಿಜ.

ಆದರೆ, ಹೀಗಿದ್ದೂ 'ಕಾವ್ಯ ಶಿಲ್ಪ'ವನ್ನೇ ತಮ್ಮ ಕಾವ್ಯದ ಮೂಲ ಗುರಿಯಾಗಿಸಿಕೊಂಡವರ ಸಂಖ್ಯೆ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಆ ಕಾರಣಕ್ಕಾಗಿಯೇ ದಿವಾಕರರ ಈ ಕವಿತೆಗಳು ಕಾವ್ಯಾಸಕ್ತರಿಗೆ ಸ್ವಲ್ಪ ಹೆಚ್ಚೇ ಎನ್ನಿಸುವಷ್ಟು ಸಮಾಧಾನವನ್ನು ಕೊಡುತ್ತವೆ. ಇದನ್ನೇನು ನಾನು ಉತ್ಪ್ರೇಕ್ಷೆ ಎನ್ನುವ ಅರ್ಥದಲ್ಲಿ ಹೇಳುತ್ತಿಲ್ಲ. ಆದರೆ, ಇತ್ತೀಚಿನ ದಿನಗಳಲ್ಲಿ ಇಷ್ಟು ಉತ್ಕಟವಾಗಿ ಭಾಷೆಯಲ್ಲಿ ಭಾವಾಭಿನಯವಾಗಬೇಕು ಎನ್ನುವುದನ್ನೇ ಏಕೋ ಗುರಿಯಾಗಿಸಿಕೊಂಡ ಕಾವ್ಯ ಅಪರೂಪವಾದ್ದರಿಂದ ದಿವಾಕರರ ಕಾವ್ಯದ ಬಗ್ಗೆ ಅಭಿಮಾನ, ಸಂತೋಷ ತೀರಾ ಸಹಜ ಎನ್ನುವ ಅರ್ಥದಲ್ಲಿ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಈ ಮಾದರಿಯ ಕಾವ್ಯವು ಭಯಂಕರವಾದ ತಾಳ್ಮೆಯನ್ನು ಅಪೇಕ್ಷಿಸುತ್ತದೆ. ದಿವಾಕರರು ಸಾವಧಾನದ ಬೆನ್ನೇರಿ ಈ ಕವಿತೆಗಳನ್ನು ಹಿಡಿದಿದ್ದಾರೆ. ಎಷ್ಟೋ ವರ್ಷಗಳಿಂದ ಈ ಕವಿತೆಗಳನ್ನು ಬರೆದಿರುವುದಾಗಿ ಅವರು ಹೇಳಿಕೊಂಡಿದ್ದಾರೆ.

ಮನುಷ್ಯ ಸ್ವತಃ ತನ್ನ ಮೇಲೂ, ಆ ಕಾರಣಕ್ಕಾಗಿ ಬದುಕಿನ ಮೇಲೂ ಹಿಡಿತ ಕಳೆದುಕೊಂಡು ಅತಂತ್ರ ಸ್ಥಿತಿಯಲ್ಲಿರುವುದರ ಶೋಧವೇ ಈ ಸಂಕಲನದ ಮೂಲ ಕೇಂದ್ರ. ಈ ಕೇಂದ್ರದ ಸುತ್ತಲೇ ಇಲ್ಲಿನ ಬಹುಪಾಲು ಕವಿತೆಗಳಿವೆ. ಅದರೊಂದಿಗೆ ಸೃಜನಶೀಲತೆಯನ್ನು ಕುರಿತೂ ಹಲವು ಕವಿತೆಗಳಿವೆ. ಮೊದಲ ಕವಿತೆ 'ಪುಸ್ತಕ'ವು ಇವರ ಸೃಜನಶೀಲತೆಯ ತಾತ್ವಿಕತೆಯನ್ನು ಕಟ್ಟಿಕೊಡಲು ಹವಣಿಸುತ್ತದೆ.